# ೨

# ಪ್ರಶ್ನೆಯ ಎದುರಿಸುವದಕ್ಕಾಗಿ ವಿನಃ ನಿವಾರಿಸುವದಕ್ಕೆಲ್ಲ

ಈ ದಿನದ ಕ್ರೈಸ್ತತ್ವವು ನೂರಾರು ವರ್ಷಗಳ ಮೂಲವನ್ನು ಹೊಂದಿದ್ದ ಯೇಸುವಿನ ದಿನದ ಯೂದಾಯದ ಜನರಿಗೆ ಸರಿಸಮಾನವಾಗಿದೆ. ಈ ಕಾಲದ ಕ್ರೈಸ್ತರು ಹಲವಾರು ವರ್ಷಗಳಿಂದ ಇರುವ ಸಂಪ್ರದಾಯಕವಾದ ನಂಬಿಕೆಯ ತಿಳುವಳಿಕೆಯನ್ನು ಚರ್ಚಿಸುವವರಾಗಿದ್ದಾರೆ. ಇದರರ್ಥವನ್ನು ತಿಳಿಯುವ ಆಶೆಯು ಮತ್ತು ಈ ಸಂಪ್ರದಾಯಗಳನ್ನು ಕಾರ್ಯನಿರ್ವಹಣೆ ಮಾಡುವ ಅಭಿಲಾಷೆಯು ಹೊಸ ಒಡಂಬಡಿಕೆಯ ಸತ್ಯ ಸಭೆಯ ಕಾರ್ಯವಾಗಿರುತ್ತದೆ - ಎಲ್ಲಾ ವಿಧದಲ್ಲೂ ಅಸಂಘಟಿತವಾಗಿರುತ್ತದೆ - ಇವೆರಡೂ ಅವಶ್ಯ ಮತ್ತು ಸವಾಲಾಗಿದೆ.

ಕೆಲವು ಸಂಗತಿಗಳು ದೇವರಿಂದಲೇ ಬಂದಿರುವದರಿಂದ ಅದನ್ನು ಬದಲಾಯಿಸಬಾರದು (2 ಥೆಸಲೋನಿಕ 3:6 ನೋಡಿರಿ). ಇನ್ನೊಂದೆಡೆ, ಯೇಸುವಿನ ದಿವಸದ ಯೆಹೂದ್ಯರಲ್ಲಿಯೂ ಇದು ಸತ್ಯವಾಗಿತ್ತು, ಕೆಲವು ಸಂಪ್ರದಾಯಗಳು ಮಾನವನಿಂದುಂಟಾಗಿದ್ದು ಮತ್ತು ಎಚ್ಚರದಿಂದಲೂ ಆಲೋಚನೆಯಿಂದಲೂ ಅಭ್ಯಾಸಮಾಡಲ್ಪಟ್ಟವುಗಳು, ದೇವ ಜನರಿಗೆ ಭಾರವಾಗುತ್ತದೆ (ಮತ್ತಾಯ 15:1-9; 23:23-28 ನೋಡಿರಿ).

## ಯೇಸು ಕ್ರಿಸ್ತನು ಅಧಿಕಾರದ ಪ್ರಶ್ನೆಯನ್ನು ಪ್ರತಿಪಾದಿಸಿದನು

ಯಾಕಂದರೆ ಯೇಸು ಯೆಹೂದ್ಯರ ಮಾನವ ಸಂಪ್ರದಾಯಗಳನ್ನು ಅಂದರೆ ಯಾವುದನ್ನು ದೈವಿಕ ನಿಯಮಗಳೆಂದು ಪರಿಗಣಿಸಿದ್ದರೋ, ಅಂತವುಗಳನ್ನು ಗೌರವಿಸಲಿಲ್ಲ, ಆತನ ಬೋಧನೆಗಳು ಮತ್ತು ಕ್ರಿಯೆಗಳ ಕುರಿತಾಗಿ ಆಗಾಗ್ಗೆ ಸವಾಲನ್ನು ಎದುರಿಸುತ್ತಿದ್ದನು. ಈ ಎಲ್ಲಾ ಸವಾಲುಗಳ ನಿಮಿತ್ತವಾದ ಪರಿಣಾಮವನ್ನು ಮತ್ತಾಯ 21:23ರಲ್ಲಿ ದಾಖಲಿಸಲಾಗಿದೆ:

> ತರುವಾಯ ಆತನು ದೇವಾಲಯಕ್ಕೆ ಬಂದು ಬೋಧಿಸುತ್ತಿರಲಾಗಿ ಮಹಾಯಾಜಕರೂ ಪ್ರಜೆಯ ಹಿರಿಯರೂ ಆತನ ಬಳಿಗೆ ಬಂದು - "ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತಿ? ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು."

ಯೇಸು ಕ್ರಿಸ್ತನ ಸೇವೆಯು ಈ ಭೂಲೋಕದಲ್ಲಿ ಅಂತ್ಯಗೊಳ್ಳುವಾಗ ಈ ಪ್ರಶ್ನೆ ಉದ್ಭವಿಸಿತು. ಯೇಸು ಕ್ರಿಸ್ತನು ಕೆಲಕಾಲ ಇಸ್ರಾಯೇಲ್ಯದಲ್ಲಿ ಸಂಚರಿಸಿ, ಆತನು ದೇವರ ರಾಜ್ಯವನ್ನು ತರುವವನೆಂಬುದಾಗಿ ಸಾರಿದನು. ಆತನ ಬೋಧನೆಯನ್ನು ಆತನ ಕಾಲದ ಜನರು ಇಚ್ಛಿಸಲಿಲ್ಲ. ಅವರ ದೃಷ್ಟಿಯಲ್ಲಿ ಆತನ ಸಂದೇಶವು ಅಪಾಯಕರವು ಹಾಗೂ ಹೊಸದು ಆಗಿತ್ತು. ಆತನ ಈ ಹೇಳಿಕೆಗಳಿಗೆ, ಆತನಿಗೆ ಅಧಿಕಾರವು ಯಾರು ನೀಡಿದರೆಂಬುದಾಗಿ ಅವರು ಕೇಳಬಯಸಿದರು.

ಆತನ ಹಿಂಬಾಲಕರು ಎದುರಿಸಿದ ಪ್ರಶ್ನೆಗಳಿಗೆ, ಆತನು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದನು ಎಂದು ಅಭ್ಯಾಸಿಸೋಣ, ಆತನು ಏನನ್ನು ಹೇಳಲಿಲ್ಲ, ಈ ಕುರಿತಾಗಿ ನಮಗೆ ಗೊಂದಲವಾಗಿದೆ. ಆತನ ಬೋಧೆಗಳಿಗೆ ಉತ್ತರ ನೀಡಬೇಕೆಂದು ಯೇಸುವು ವಿವಾದ ಮಾಡಲಿಲ್ಲ, ಆತನು ಕರ್ತನಾಗಿದ್ದರು ತನ್ನ ಅಧಿಕಾರವನ್ನು ಚಲಾಯಿಸಲಿಲ್ಲ, ಇತರೆ ಸಂದರ್ಭದಲ್ಲಿ ಮಾಡಿದಂತದ್ದನ್ನು ಮಾಡಲಿಲ್ಲ (ಯೋಹಾನ 13:13). ಅದರ ಬದಲಾಗಿ, ಅವರಿಗೆ

ಪ್ರಶ್ನೆ ಕೇಳುವ ಹಕ್ಕು ಇತ್ತು ಎಂಬ ಸೂಚನೆಯನ್ನು ನೀಡಿದನು: "ನಾನು ಸಹ ನಿಮ್ಮನ್ನು ಒಂದು ಮಾತು ಕೇಳುತ್ತೇನೆ, ಅದನ್ನು ನೀವು ನನಗೆ ಹೇಳಿದರೆ ನಾನೂ ಯಾವ ಅಧಿಕಾರದಿಂದ ಇದನ್ನು ಮಾಡುತ್ತೆನೆಂಬುದನ್ನು ನಿಮಗೆ ಹೇಳುತ್ತೇನೆ. ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಎಲ್ಲಿಂದ ಬಂತು? ಪರಲೋಕ ದಿಂದಲೋ? ಮನುಷ್ಯರಿಂದಲೋ ಅಂದನು" (ಮತ್ತಾಯ 21:24, 25ಎ). ಯೇಸುವನ್ನು ಬೆಲೆ ಇಲ್ಲವೆಂದಿಣಿಸುವಾಗ ಅವರ ಕ್ರಿಯೆಗೆ ಆತನು ಪ್ರತಿಕ್ರಿಯಿಸಿದನು. ಮತ್ತಾಯನ ವಿವರಣೆಯು ಮುಂದುವರಿಯುತ್ತದೆ:

> ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಎಲ್ಲಿಂದ ಬಂತು? ಪರಲೋಕ ದಿಂದಲೋ? ಮನುಷ್ಯರಿಂದಲೋ ಅಂದನು. ಆಗ ಅವರು - ಪರಲೋಕದಿಂದ ಬಂತೆಂದು ನಾವು ಹೇಳಿದರೆ ಹಾಗಾದರೆ ನೀವು ಅವನನ್ನು ಯಾಕೆ ನಂಬಲಿಲ್ಲ ಎಂದು ನಮಗೆ ಹೇಳಾನು; ಮನುಷ್ಯರಿಂದ ಬಂತೆಂದು ಹೇಳಿದರೆ ನಮಗೆ ಜನರ ಭಯವದೆ; ಯೋಹಾನನು ಪ್ರವಾದಿಯೆಂದು ಎಲ್ಲರೂ ಎಣಿಸಿದ್ದಾರಲ್ಲಾ ಎಂಬದಾಗಿ ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಕಡೆಗೆ ಅವರು - ನಾವರಿಯೆವು ಎಂದು ಯೇಸವಿಗೆ ಉತ್ತರಕ್ಕೊಟ್ಟರು (ಮತ್ತಾಯ 21:25ಬಿ-27ಎ).

ಈ ಉದ್ದೇಶಗಳನ್ನು ತಿಳಿಸಿದ ನಂತರ, ಯೇಸು ಅವರಿಗೆ ಉತ್ತರಿಸಲಿಲ್ಲ: "ಆಗ ಆತನು ಅವರಿಗೆ ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೇನೋ ಅದನ್ನು ನಾನು ನಿಮಗೆ ಹೇಳು ವದಿಲ್ಲ ಅಂದನು" (ಮತ್ತಾಯ 21:27ಬಿ).

ಆತನ ಪ್ರಶ್ನೆಗೆ ಅವರು ಉತ್ತರಿಸದೆ ಇದ್ದದ್ದರಿಂದ ಯೇಸು ಸಹ ಉತ್ತರಿಸಲಿಲ್ಲ. ಆದರೂ ಅವರ ಪ್ರಶ್ನೆಗೆ ಆತನು ವಿವಾದ ಉಂಟುಮಾಡಲಿಲ್ಲ. ಆತನು ತನ್ನ ಕರೆಯ ಪ್ರತಿಜ್ಞೆಯನ್ನು ನೆನಪು ಮಾಡಿ, ಆತನು ಬಯಸಿದ ಬದಲಾವಣೆಗಾಗಿ ಪ್ರತಿಪಾದನೆ ಮಾಡುವ ಹಕ್ಕಿನ ನಿರ್ಣಯವನ್ನು ಮಾಡಿದನು. ಬೋಧನೆ ಮತ್ತು ಕೆಲಸದ ಸೇವೆಯು ಆತನಿಗಿದ್ದ ಅಧಿಕಾರಕ್ಕೆ ಸಾಕ್ಷ್ಯಾಧಾರಗಳನ್ನು ನೀಡಿದ್ದವು (ನೋಡಿರಿ ಯೋಹಾನ 20:30, 31).

ಈ ದಿನದ ಕ್ರೈಸ್ತರು ಸಹ "ಯಾವ ಅಧಿಕಾರದಿಂದ ನೀನು ಇದನ್ನು ಮಾಡುತ್ತಿ, ಯಾರು ನಿನಗೆ ಈ ಅಧಿಕಾರವನ್ನು ನೀಡಿದರು?" ಎಂಬ ಪ್ರಶ್ನೆಗಳನ್ನು ಕೇಳಿರಬಹುದು. ನಾವು ಸರಿಯಾದ ಉತ್ತರದಿಂದ ಸಿದ್ಧರಾಗಿರಬೇಕು.

ಯೇಸುವನ್ನು ಹಿಂಬಾಲಿಸುವ ಕುರಿತಾದ ಬೋಧನೆ ಹಾಗು ಕ್ರಿಯೆಗಳ ಚಾಲನೆಯಲ್ಲಿ ನಾವು ಕೆಲವು ಧೈರ್ಯದ ಸವಾಲನ್ನು ಮಾಡಬೇಕಾಗುತ್ತದೆ. ದೇವರ ಬಳಿಗೆ ಯೇಸು ಮಾತ್ರ ಮಾರ್ಗವಾಗಿದ್ದಾನೆ, ಆತನಲ್ಲಿ ನಂಬಿಕೆಯಿಟ್ಟು ಆತನಿಗೆ ಅಧೀನರಾಗಿರುವದರಲ್ಲಿ ಮಾತ್ರ ರಕ್ಷಣೆ ಮತ್ತು ಜೀವವು ನೆರವೇರುತ್ತದೆ. ಆತನ ಹೇಳಿ ಕೆಗೆ ಸಮನಾದ ಬೋಧನೆಯು ಸಭೆಗಳಲ್ಲಿ ಇರಬೇಕು. ವಿವಿಧವಾದ ಪ್ರಶ್ನೆಗಳು ಇರಬಹುದು, ಆದರೆ ನಮ್ಮ ಬೋಧನೆಗೆ ಮತ್ತು ಕ್ರಿಯೆಗೆ ಅಧಿಕಾರ ನೀಡಿದವರ್ಯಾರು ಎಂಬ ಪ್ರಶ್ನೆಯನ್ನು ಲೋಕವು ಕೇಳುತ್ತದೆ.

## ಅಧಿಕಾರದ ಕುರಿತಾದ ಪ್ರಶ್ನೆಗಳನ್ನು ಈ ದಿನ ಎದುರಿಸಲೇಬೇಕು

ಪ್ರಶ್ನೆಗಳನ್ನು ಯೇಸು ಕ್ರಿಸ್ತನು ಎದುರಿಸಕ್ಕಿಂತಲು, ಈ ದಿನ ನಾವುಗಳು ಮೂಲ ಭೂತ ಪ್ರಶ್ನೆಗಳನ್ನು ಎದುರಿಸುವ ಸಂದರ್ಭ ಉಂಟಾಗಿದೆ. ಯೇಸುವನ್ನೆ ಸವಾ ಲಾಕದವರು ದೇವರು ಇದ್ದಾನೆ ಎಂದು ನಂಬಿದ್ದರು. ದೇವರು ಯೋಜನೆಯನ್ನು ಹೊಂದಿದ್ದು, ಅದನ್ನು ನೆರವೇರಿಸಬೇಕೆಂದು ಬಯಸುತ್ತಾನೆ, ಆ ಯೋಜನೆಯ ಸತ್ಯವನ್ನು ತಿಳಿದು ಅರಿತುಕೊಳ್ಳಬೇಕು. ಈ ಕಲ್ಪನೆಗಳು, ಅಂದರೆ ಮುಖ್ಯವಾಗಿ ಮೂರನೆಯದು, ಆ ಸತ್ಯವನ್ನು ಭೂಲೋಕದಲ್ಲಿ ಅನೇಕರು ಅರಿತಿರುವದಿಲ್ಲ. ಪೀಟರ್ ಕ್ರಿಷ್ಟ್ ಎಂಬ ಪಂಡಿತನು,

"ಸೈತಾನನು ನವೀನ ಪಾಶ್ಚಿಮಾತ್ಯ (ಕ್ರೈಸ್ತರ) ಸಿದ್ಧಾಂತಗಳನ್ನು ಕೆಡವಿಹಾಕಲು ಯೋಜನೆಯನ್ನು ಮಾಡಿದ್ದಾನೆ" ಎಂದು ಹೇಳಿರುವರು. "ಪಾಶ್ಚಿಮಾತ್ಯದವರು ತಮ್ಮ ಸಿದ್ದಾಂತಗಳಿಗೆ ಹೆಚ್ಚು ಗಮನ ನೀಡದೆ ಇರುವದರಿಂದ, ಸೈತಾನನ ಯೋಜನೆ ಫಲಿಸುತ್ತದೆ, ಅಲ್ಲಿ ಅವರು ಎಚ್ಚರ ತಪ್ಪುತ್ತಾರೆ."[1] ಪೂರ್ವಜರು ತಿಳಿದಿದ್ದ ಸಂಗತಿಗಳನ್ನು ಈಗಿನ ಜನರು ಮರೆತವರಾಗಿ ನಟಿಸುತ್ತಾರೆ: ಈ ನಟನೆಗಳು ಯೋಜನೆಗಳಲ್ಲಿ ಫಲಕಾರಿಯಾಗುವದಿಲ್ಲ. ಅದರ ಬದಲಾಗಿ ಅವರು ಮಾಡುವಂತದ್ದೆ ಒಂದು ನಟನೆಯಾಗಿರುತ್ತದೆ.[2] ಅವರ ಯೋಚನೆಗಳು ಸರಿಯಾಗಿದ್ದರೆ, ಅವರ ಕಾರ್ಯಗಳು ಸರಿಯಾಗಿರುತ್ತವೆ. ತಪ್ಪಾದ ಯೋಚನೆಯು ತಪ್ಪಾದ ಫಲಿತಾಂಶ ನೀಡುತ್ತದೆ.

ಸತ್ಯವು ದೃಢವಾದದ್ದು ಎಂಬುದನ್ನು ಸಾರ್ವಜನಿಕವಾಗಿ ತಿರಸ್ಕಾರ ಹೊಂದುವ ವಿಷಯವನ್ನು ಗಮನಿಸಿರಿ. ಒಬ್ಬ ಬರಹಗಾರನು ತಿಳಿಸಿದಂತೆ ಸುಮಾರು ಇಪ್ಪತ್ತು ಸಂದರ್ಶನಗಳನ್ನು ಮಾಡಿ, ದೃಢವಾದ ಸತ್ಯವೆಂಬುದು ಇದೆಯೆ ಎಂದು, ವಿಶ್ವವಿದ್ಯಾಲಯದಲ್ಲಿ ಕೇಳಲಾಯಿತು. ಆ ಸತ್ಯವು ಎಲ್ಲಾ ಸಮಯದಲ್ಲಿ, ಎಲ್ಲಾ ಜನರಲ್ಲಿ ಸತ್ಯವಾಗಿರುವ ಸತ್ಯ ಎಂಬುದಾಗಿ: "ಎಲ್ಲರಲ್ಲಿ ಒಬ್ಬನು ಪ್ರತಿಕ್ರಿಯಿಸಿ ಈ ಪದಗಳನ್ನು ಹೇಳಿದನು, ಅದು ಸತ್ಯವಾಗಿರಬಹುದು"; "ದೃಢವಾದ ಸತ್ಯ ಎಂಬುದಾಗಿ ಇರುವದಿಲ್ಲ"; "ಒಂದು ವೇಳೆ ದೃಢವಾದ ಸತ್ಯ"; "ಎಂಬುದು ಇರುವುದಾದರೆ, ಅದನ್ನು ಹೇಗೆ ಅರಿಯೋಣ?"; "ದೃಢ ಸತ್ಯವನ್ನು ನಂಬುವವರು ಅಪಾಯಕಾರಿಗಳಾಗಿದ್ದಾರೆ." ಸತ್ಯದ ಈ ವಿಧವಾದ ದೃಷ್ಟಿಕೋನವನ್ನು ಬರಹಗಾರನು, ಮನಸ್ಸಾಕ್ಷಿಯ ಬೆಳವಣಿಗೆಯ "ಸಂಬಂಧದ" ಪ್ರತಿಬಿಂಬ ಎಂದು ಕರೆ ದಿರುವನು ಅದು ನಮ್ಮ ಸಂಸ್ಕೃತಿಯಲ್ಲಿ ನೆಲೆಗೊಂಡಿರುತ್ತದೆ. ಒಂದು ನಶಿಸಲಾರದ "ಸತ್ಯವೇನೆಂದರೆ ನಮ್ಮ ಬಯಕೆಗಳಲ್ಲಿ, ಮತ್ತು ವಿಶೇಷ ಉಡುಪುಗಳಲ್ಲಿ ಇದರ ಪರಿಣಾಮವನ್ನು ಕಾಣದೆ, ನಮ್ಮ ಆತ್ಮಿಕ ಜೀವಿತದಲ್ಲಿ, ನೈತಿಕತೆಯಲ್ಲಿ, ಅದು ಸತ್ಯದ ಪರಿಣಾಮವನ್ನು ಬೀರುತ್ತದೆ."[3]

ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿರುವ ಸಂಬಂಧಿತ ಎಂಬ ಪ್ರಖ್ಯಾತ ವಿಷಯದ ಬಗ್ಗೆ ಪೋಲ್‌ಸ್ಟಾರ್ ಜಾರ್ಜ್ ಬರ್ನ್‌ರವರು ಕೆಲವು ದಾಖಲೆಗಳನ್ನು ಮಾಡಿರುವರು. "1991ರಲ್ಲಿ, ಶೇಕಡ 67/ರಷ್ಟು ಅಮೆರಿಕನ್ನರು, ದೃಢ ಸತ್ಯದ ಬಗ್ಗೆ ನಂಬಲಿಲ್ಲ. 1994,ಅದು ಶೇಕಡ 75/ಕ್ಕೆ ಏರಿತು."[4] 1991ರ ದಾಖಲೆಯ ನಂತರದ 11 ವರ್ಷಗಳಲ್ಲಿ 17 ಡಿಸೆಂಬರ್ 2002ರಲ್ಲಿ ಸುದ್ದಿಯನ್ನು ಬಿಡುಗಡೆ ಮಾಡಿ. ಅವರು ಸಾಮಾನ್ಯವಾದ ಅದೆ ಸಂಖ್ಯೆಗಳನ್ನು ತಿಳಿಸಿದರು, ಈ ಕೆಳಗಿನದನ್ನು ಗಮನಿಸಿ:

> ಅಧಿಕ ಕ್ರೈಸ್ತರಲ್ಲು ಮತ್ತು ಅನ್ಯರಲ್ಲು, ಇರುವ ದೊಡ್ಡವರು ಮತ್ತು ಬಾಲಪ್ರಾಯದವರು ನೈತಿಕವಾದ "ದೃಢ ಸತ್ಯವಿಲ್ಲ" ಎಂದು ತಿಳಿಸುತ್ತಾರೆ. ಮೂರು ದೊಡ್ಡವರಲ್ಲಿ ಇಬ್ಬರೂ, ಐದು ಬಾಲಪ್ರಾಯದವರಲ್ಲಿ ನಾಲ್ಕು ಜನ ಸತ್ಯವು ಕೇವಲ ವೈಯಕ್ತಿಕ ಸಂಬಂದದ್ದಾಗಿರುತ್ತದೆ, ಮತ್ತು ಪರಿಸ್ಥಿತಿಗೆ ಅನುಗುಣವಾಗಿರುತ್ತದೆ ಎಂದು ವಾಗ್ವಾದ ಮಾಡುತ್ತಾರೆ.

ಫೆಬ್ರವರಿ 12, 2002ರಲ್ಲಿ ತಿಳಿಸಿದ ಸುದ್ಧಿಯಂತೆ, ಬಾಲಪ್ರಾಯದವರು (ಶೇಕಡ 83/ರಷ್ಟು ದೃಢ ಸತ್ಯವಿಲ್ಲವೆಂದು ಹೇಳುತ್ತಾರೆ). ದೊಡ್ಡವರು (ಶೇಕಡ 66/ರಷ್ಟು ಈ ಯೋಜನೆಯನ್ನು ಅಲ್ಲಗಳೆಯುತ್ತಾರೆ) ಇದರಲ್ಲಿ 18 ರಿಂದ 35 ವರ್ಷ ಪ್ರಾಯದವರು ಒಳಗೊಂಡಿದ್ದಾರೆ, ಅದರಲ್ಲಿ ಶೇ 75/ರಷ್ಟು ಜನರು ವೈಯಕ್ತಿಕಕ್ಕೆ ಸಂಬಂಧ ಪಟ್ಟ ಸತ್ಯದ ಕುರಿತಾಗಿ ನಂಬುತ್ತಾರೆ, ಎಂದು ಬರ್ನಾರವರು ನಿರ್ಣಯಿಸಿದ್ದಾರೆ. "ಸತ್ಯವು ವೈಯಕ್ತಿಕಕ್ಕೆ ಸಂಬಂಧ ಪಟ್ಟ ವಿಷಯವು ಪ್ರಖ್ಯಾತಿಗೊಳ್ಳುತ್ತಿದೆ, ಯಾಕಂದರೆ ಆ ವಿಷಯವು ತಲಾ ತಲಾಂತರದಿಂದ, ಈಗಿನ ಬಾಲಪ್ರಾಯದವರಿಗೆ ಬಂದಂತ ವಿಷಯವಾಗಿರುತ್ತದೆ."[5]

ಈ ಲೋಕದಲ್ಲಿರುವ ಸಕಲ ಅಧಿಕಾರವು ಸವಾಲಿಗೆ ಒಳಗಾಗಿದೆ, ಅದು ನಮ್ಮನ್ನು

ಆಶ್ಚರ್ಯಪಡಿಸಬಾರದು, ನಂತರ, ಜನರು ದೇವರು ನ್ಯಾಯವನ್ನು ಅನುಸರಿಸಿ ಎಂದು ಹೇಳುವಾಗಲೂ ಚಕಿತರಾಗಬಾರದು. ಒಂದು ವೇಳೆ ಸಭೆಯಲ್ಲಿ, ವೈಯಕ್ತಿಕ ಸಂಬಂಧ ಪಟ್ಟಂತ ಸತ್ಯ ಎಂಬುದಾಗಿ ಬೋಧಿಸುವಾಗಲೂ, ನಾವು ಮೋಸಕ್ಕೆ ಒಳಗಾಗಬಾರದು. ಇದು ಲೋಕದಲ್ಲಿ ಹರಡುತ್ತಿದೆ, ಅದಕ್ಕೆ ಹೆಚ್ಚಾದ ಪ್ರತಿಪಾದವನ್ನು ನಾವು ಮಾಡಿರುವದಿಲ್ಲ. ಬರ್ನಾರರ ಮುಂದುವರಿದ ಅಧ್ಯಾಯನದಲ್ಲಿ ಸುವಾರ್ತೆಯನ್ನು ನಂಬುವ ಕ್ರೈಸ್ತರು, ತೀವ್ರ ವಿಶ್ವಾಸಿಗಳು, ಮತ್ತು ಬೈಬಲನ್ನು ನಂಬುವ ಜನರು - ಇವರುಗಳು ಸಹ ದೃಢಸತ್ಯದ ಬಗ್ಗೆ ನಂಬಿಕೆ ಇಟ್ಟಿರುವದಿಲ್ಲ ಎಂದು ತಿಳಿಸಿರುವರು ಇದರ ಪರಿಣಾಮವಾಗಿ, ಅವರ ನಂಬಿಕೆಯು ಅವರ ಭಾವೋದ್ವೇಗದಲ್ಲಿ ಇರುತ್ತದೆ ವಿನಃ ಅವರ ಯೋಚನೆಗಳಲ್ಲಿ ಇರುವದಿಲ್ಲ.[6]

ಪ್ರಾಯೋಗಿಕವಾದ ಮಾತುಗಳಲ್ಲಿ, ಒಂದು ಸತ್ಯವು ಸರಿಯಾದದ್ದು ಎಂದು ಹೇಳಿದರೆ, ಅಲ್ಲಿ ಸಂದೇಹವು ಉಂಟಾಗಬಹುದು ಎಂಬ ಅರ್ಥವಿದೆ. ಇದು ಸಾಮಾನ್ಯವಾದದ್ದೆ ಆದುದರಿಂದ, ವಾದ್ಯವಿಲ್ಲದ ಹಾಡುಗಳನ್ನು (ಕಾಪೆಲ್ಲ) ಹಾಡುವ ವಿಷಯವನ್ನು ಒಂದು ಸಂಗತಿಯನ್ನಾಗಿ ಮಾಡದೆ ಅಥವಾ ಇತರೆ ಸಂಗತಿಗಳನ್ನು ಅರಿಯಲು ಸತ್ಯದ ಸ್ವಭಾವವನ್ನು ನಾವುಗಳು ಅರಿಯಬೇಕು.

ಅನುಭವಿಯಾಗಿರುವ ಕ್ರೈಸ್ತರು ಸತ್ಯವನ್ನು ತಕ್ಷಣಕ್ಕೆ ಒಪ್ಪುವದಿಲ್ಲ. ಈ ಕಾರಣದಿಂದ, ಆದುದರಿಂದ ನಾವು ತಗ್ಗಿಸಲ್ಪಟ್ಟವರಾಗಿ ಸತ್ಯದ ಕುರಿತು ಹೊಂದಾಣಿಕೆ ಮಾಡಿಕೊಳ್ಳುವವರಾಗಿರುತ್ತೇವೆ, ಮತ್ತು ನಿರ್ದಿಷ್ಟವಾದ ಸತ್ಯದ ಕುರಿತಾಗಿಯೂ ಕಪ್ಪೆಯು ಬಿಸಿಯಾಗುವವರೆಗೆ ಬಾಂಡಲಿಯಲ್ಲಿ ಕುಳಿತಿರುವ ಹಾಗೆ, ದೇವರ ವಾಕ್ಯದ ಅಧಿಕಾರದಲ್ಲಿ ನಂಬುವವರು ಸಹ ಸತ್ಯದ ಕುರಿತಾದ ನಮ್ಮ ದೃಷ್ಟಿಯನ್ನು ನಾಶಮಾಡಿಕೊಳ್ಳುವ ಅಪಾಯದಲ್ಲಿರುತ್ತೇವೆ. ನಂತರ ನಾವು ನಿಧಾನವಾಗಿ ಮುಂದುವರಿದು, ದೇವರು ಇಚ್ಚಿಸುವ ಬೋಧನೆಗಳನ್ನು ತಿಳಿಯಲು ನಿರಾಕರಿಸುತ್ತಾರೆ. ಪುರಾತನ ಇಸ್ರಾಯೇಲ್ಯರಲ್ಲಿ ಇದ್ದಂತೆ, ಕ್ರೈಸ್ತರು ಹೆಚ್ಚಾಗಿ ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ, "ಇತರ ಜನಾಂಗದಂತೆ ಆಗುವರು" (1 ಸಮುವೇಲ 8:5, 20). ನಾವು ನಮ್ಮ ಪ್ರತ್ಯೇಕತೆಯನ್ನು ಕಳೆದುಕೊಂಡರೆ, ದೇವರು ಬಯಸುವಂತ ಬೆಳಕು ಮತ್ತು ಉಪ್ಪಾಗಿರಲು ಸಾಧ್ಯವಿಲ್ಲ (ಮತ್ತಾಯ 5:13-16) ನಂತರ ನಾವು ದೇವರ ಮಕ್ಕಳಾಗಿರುವ ಸ್ಥಾನದಿಂದ ನಿಧಾನವಾಗಿ ಇಳಿದು ಹೋಗುತ್ತೇವೆ.

## ಮುಕ್ತಾಯ

ಈ ಸಂಸ್ಕೃತಿಯ ಪದ್ಧತಿಯಲ್ಲಿ - ನಮ್ಮ ನಂಬಿಗಸ್ತಿಕೆಗೂ ಮತ್ತು ಇತರರು ಸತ್ಯವನ್ನು ಸ್ಪಷ್ಟವಾಗಿ ಅರಿಯುವದಕ್ಕೂ (ಅಪೊಸ್ತಲರಕೃತ್ಯಗಳು 18:24-26 ನೋಡಿರಿ) - ನಾವು ದೇವರ ಅಧಿಕಾರದ ಕುರಿತು ಅಭ್ಯಾಸಿಸಬೇಕು ಮತ್ತು ನಮ್ಮ ಎಲ್ಲಾ ಕಾರ್ಯಗಳಲ್ಲಿ ಇರುವ ಸಂಬಂಧವನ್ನು ತಿಳಿಯಬೇಕು. ಯೇಸುವಿನ ಮಾದರಿಯನ್ನು ನೆನಪು ಮಾಡಬೇಕು, ಆತನು ನಮ್ಮ ನಂಬಿಕೆಗೂ ಮತ್ತು ಬೋಧನೆಗೂ ನ್ಯಾಯವಾದ ಅಧಿಕಾರವನ್ನು ಸೇರಿಸಿದ್ದಾನೆ. ವರ್ತಮಾನ ಕಾಲದ ಘಟನೆಗಳಲ್ಲಿ, ಅಧಿಕಾರಕ್ಕೆ ತೀವ್ರ ವಿರೋಧವಿರುವದರಿಂದ, ದೇವರ ಸತ್ಯವನ್ನು ಬೋಧಿಸುತ್ತ ನಾವು ಮುಂದುವರಿಯಬೇಕು. ಜನರು ಕೆಲವು ಸತ್ಯಗಳನ್ನು ಅರಿಯುವರು ಎಂದು ನಾವು ಭ್ರಮಿಸಬಾರದು. ಪೌಲನೊಂದಿಗೆ ನಾವು ಸೇರಿ, "ನಾವು ಆತನನ್ನು ಪ್ರಸಿದ್ಧಿ ಪಡಿಸುವವರಾಗಿ ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣ ಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸೋಣ" (ಕೊಲೊಸ್ಸೆ 1:28).

ಕೆಲವು ವರ್ಷಗಳ ಹಿಂದೆ, ನಾನು ಸೇವೆ ಮಾಡುತ್ತಿದ್ದ ಸಭೆಯಲ್ಲಿದ್ದ ಒಬ್ಬ ಕಾಲೇಜಿನ ಹುಡುಗನು ನನ್ನಲ್ಲಿ ಸಹಾಯ ಕೇಳಿ ಬಂದನು. ಆ ಯೌವನಸ್ಥನು ಸಭೆಯಲ್ಲಿಯೇ ಬೆಳೆದವನಾಗಿದ್ದನು; ಅವನ ತಂದೆ ಮತ್ತು ಅವನ ಚಿಕ್ಕಪ್ಪ ಸಭೆಯಲ್ಲಿ ಹಿರಿಯರಾಗಿದ್ದರು.

ಸಾಯಂಕಾಲದ ತರಗತಿಯು ಮುಗಿದ ನಂತರ, ಆರಾಧನೆಯ ಸಭೆಯಲ್ಲಿ ಯಾಕೆ (ಕಾಪೆಲ್ಲವನ್ನು) ವಾಧ್ಯರಹಿತವಾದ ಸಂಗೀತವನ್ನು ಹಾಡುತ್ತೇವೆ ಎಂಬ ಪ್ರಶ್ನೆಯನ್ನು ಕೇಳಿದನು. ಅವನು ಮುಂದಿನ ಹೇಳಿಕೆ ನನ್ನನ್ನು ತಾಕಿತು: "ಅದರಲ್ಲಿ ಕಾರಣವಿರಬಹುದು, ಆದರೆ ಅದರ ಕುರಿತಾಗಿ ನಾನು ಅರಿಯೆನು."

ಅವನು ವರ್ಷಾನುಗಟ್ಟಲೆ ಬೈಬಲ್ ಶಾಲೆಯ ನಂತರ, ಮನಸ್ಸಾಕ್ಷಿಯುಳ್ಳ ಕ್ರೈಸ್ತ ಬೋಧಕರ ಮುಂದೆ ಕುಳಿತುಕೊಂಡು ಅವನು "ಪ್ರತಿಪಾದ" ಮಾಡಲು ಸಿದ್ಧನಾಗಿರಲಿಲ್ಲ ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಉತ್ತರ ಹೇಳುವದಕ್ಕೆ ಸಿದ್ಧನಿರಲಿಲ್ಲ (1 ಪೇತ್ರ 3:15). ಮನಪರಿವರ್ತನೆಯಿಂದ ಈ ಪತ್ರಿಕೆಯನ್ನು ಬರೆಯಲಾಗಿದೆ "ಉತ್ತಮವಾಗಿ ಮಾಡುವದಕ್ಕೂ ಯಾವ ಅಧಿಕಾರದಿಂದ ... ಎಂಬ ಪ್ರಶ್ನೆಯಿದೆ?" ಎಂದು ಎದುರಿಸುವದಕ್ಕೆ ವಿನಃ ತಪ್ಪಿಸಿಕೊಳ್ಳುವದಕ್ಕಲ್ಲ.

---

ಟಿಪ್ಪಣಿಗಳು

[1]Peter Kreeft, *How to Win the Culture War: A Christian Battle Plan for a Society in Crisis* (Downers Grove, Ill.: InterVarsity Press, 2002), 71. [2]ಆ ಅಂಶಕ್ಕೆ ಬೈಬಲ್ ಉದಾಹರಣೆ ಎಫೆಸ 4:17-24 ಅನ್ಯರ ವರ್ತನೆಯನ್ನು ಕುರಿತು "ಅನ್ಯಜನರು ನಡೆದು ಕೊಳ್ಳುವ ಪ್ರಕಾರ" ಅವರು ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ ನಡೆದುಕೊಳ್ಳುತ್ತಾರೆ. ಮತ್ತು ಅವರ ಅಜ್ಞಾನದಿಂದಲೂ (ವಚನ 18) ಕ್ರೈಸ್ತರ ವರ್ತನೆಯ ಅದು ವಿರುದ್ಧವಾಗಿಯೇ ಇರಬೇಕು. ಎಫೆಸದ ಪೌಲನು ಓದುಗರು, "ಕೇಳಿದರು" "ಬೋಧಿಸಲ್ಪಟ್ಟರು" ಅದು ಯೇಸುವಿನಲ್ಲಿದ್ದ ಸತ್ಯ "ನೂತನ ಜೀವಿತವನ್ನು" ಹೊಂದಿದವರಾಗಿ ವ್ಯತ್ಯಾಸವುಳ್ಳ ಜೀವನ ಶೈಲಿಯನ್ನು ಹೊಂದಿದ್ದರು (23, 24ಎ ವಚನಗಳು) ವಚನ 20ರಲ್ಲಿ ಹಳೆಯ ಜೀವಿತದಿಂದ ಹೊಸದನ್ನು ಪಡೆದರು ಈ ರೀತಿಯಾಗಿ ಕ್ರಿಸ್ತನನ್ನು ಕಲಿತುಕೊಂಡರು. [3]Jim Leffel, "Our New Challenge: Postmodernism," *in Dennis McCallum, ed., The Death of Truth: What's Wrong with Multiculturalism, the Rejection of Reason and the New Postmodern Diversity* (Minneapolis: Bethany House Publishers, 1996), 31. [4]These statistics are cited in Ravi Zacharias, "Appendix B: The Inextinguishable Light," *Deliver Us From Evil: Restoring the Soul in a Disintegrating Culture* (Dallas: Word Publishing, 1996), 212. [5]The news releases cited here are found on Barna's website, www.barna.org, under the headings "Absolute Truth" and "Relativism." [6]ಅವರ ಅಧ್ಯಾಯನ ಪರಿಣಾಮದ ಸುದ್ಧಿಯನ್ನು ಫೆಬ್ರವರಿ 2002ರ ಸುದ್ದಿಯಲ್ಲಿ ನೋಡುತ್ತೇವೆ. ಹೊಸದಾಗಿ ಹುಟ್ಟಿದವರು 32/ಅವರು ನೈತಿಕತೆಯನ್ನು ನಂಬುವವರಾಗಿದ್ದರು. ಹೊಸದಾಗಿ ಹುಟ್ಟಿದ ಬಾಲಪ್ರಾಯದವರು ಶೇ 9/ಲಿಟೇಟಿಸ್ ಮತ್ತು ತಿರಸ್ಕರಿಸಿದ್ದಾರೆ (ಜಾಕರ್‌ಯಸ್, 212).